**ದಿನಾಂಕಃ 15.06.2026 ರಂದು ಸಾಕ್ಷಿಗೆ ಪುನಃ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ ಪ್ರತಿವಾದಿ ನಂ.2 ರ ಪರವಾಗಿ ಶ್ರೀ ಓ ಎಸ್ ವಕೀಲರಿಂದ**.

ನಿಮ್ಮ ತಂದೆ ಮೂಲತಃ ಕುಂದಾಪುರ ತಾಲ್ಲೂಕಿನ ತ್ರಾಸಿ ಗ್ರಾಮದವರು ಅಂದರೆ ಸರಿ. ನಿಮ್ಮ ತಂದೆ ಆನವಟ್ಟಿಗೆ ಬಂದು ಸುಮಾರು 60 ವರ್ಷ ಆಗಿರಬಹುದಾ ಅಂದರೆ ಸಾಕ್ಷಿ ಆಗಿರುತ್ತದೆ ಎನ್ನುತ್ತಾರೆ. ನಿಮ್ಮ ತಂದೆ ಆನವಟ್ಟಿಯಲ್ಲಿ ಹೋಟೇಲ್ ನಡೆಸಿ ಜೀವನ ಸಾಗಿಸುತ್ತಿದ್ದರು ಅಂದರೆ ಸರಿ. ನನ್ನ, ಪ್ರತಿವಾದಿ ನಂ.2, 5 ಮತ್ತು 6 ರವರ ಮದುವೆಯನ್ನು ನನ್ನ ತಂದೆಯೇ ಮಾಡಿರುತ್ತಾರೆ ಅಂದರೆ ಸರಿ. ದಾವಾ ಶೆಡ್ಯೂಲ್ ಐಟಂ ನಂ.1,4 ಮತ್ತು 5 ನೇ ಆಸ್ತಿಗಳನ್ನು ನನ್ನ ತಂದೆ ಸ್ವಂತ ಖರೀದಿ ಮಾಡಿರುವ ಸ್ವತ್ತುಗಳು ಅಂದರೆ ಸರಿ. ನನ್ನ ತಂದೆ ಜೀವಂತ ಇದ್ದಾಗ ದಾವಾ ಶೆಡ್ಯೂಲ್ ಐಟಂ ನಂ.1,4 ಮತ್ತು 5 ನೇ ಆಸ್ತಿಗಳನ್ನು ಗಂಡು ಮಕ್ಕಳಿಗೆ ಕೊಡಬೇಕೆಂದು ಎಂಬ ಇಚ್ಚೆ ಹೊಂದಿದ್ದರು ಅಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಐಟಂ ನಂ.1,4 ಮತ್ತು 5 ನೇ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತುಗಳು ಆಗಿರುವ ಕಾರಣ ಅವುಗಳನ್ನು ಪರಭಾರೆ ಮಾಡುವ ಹಕ್ಕು ಅವರಿಗೆ ಇತ್ತು ಅಂದರೆ ಸಾಕ್ಷಿ ನನ್ನ ತಂದೆ ಪರಭಾರೆ ಮಾಡಿಲ್ಲ ಎನ್ನುತ್ತಾರೆ. ನನ್ನ ತಂದೆ ದಾವಾ ಶೆಡ್ಯೂಲ್ ಐಟಂ ನಂ.1,4 ಮತ್ತು 5 ಆಸ್ತಿಗಳನ್ನು ತನ್ನ ಜೀವಿತಾವಧಿಯಲ್ಲಿ ಪರಭಾರೆ ಮಾಡದೆ ಇದ್ದರೆ ಆ ಆಸ್ತಿಗಳಲ್ಲಿ 2 ನೇ ಪ್ರತಿವಾದಿಗೂ ಸಮನಾದ ಹಿಸ್ಸೆ ಇರುತ್ತದೆ ಅಂದರೆ ಸರಿ.

**ಪಾಟಿ ಸವಾಲುಃ** ಪ್ರತಿವಾದಿ ನಂ.3 ಮತ್ತು 7 ರ ಪರವಾಗಿ ಶ್ರೀ ಎಂ ಎಸ್ ಎಂ ವಕೀಲರು ಸಮಯ ಕೋರಿರುತ್ತಾರೆ, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.